ಓ.ಎಸ್. ನಂಃ 190/2023
ಪಿ.ಡಬ್ಲ್ಯೂ-1 (ಸಿದ್ದವ್ವ)

ದಿನಾಂಕ: 13-11-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎನ್.ಎಸ್.ಜಿ. ಪ್ರತಿವಾದಿ 15 ರವರ ಪರ ವಕೀಲರಿಂದಃ**

20. ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರು ಖರೀದಿ ಕರಾರ ಪತ್ರವನ್ನು ಪ್ರತಿವಾದಿ 15 ರವರಿಗೆ ಬರೆದುಕೊಟ್ಟಿದ್ದನ್ನು ದಿನಾಂಕ 08/06/2020 ರಂದು ನೋಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರು 15ನೇ ಪ್ರತಿವಾದಿಗೆ ಖರೀದಿ ಕರಾರ ಪತ್ರ ಬರೆದುಕೊಟ್ಟ ಪ್ರಕಾರ 15ನೇ ಪ್ರತಿವಾದಿ ಮೇಲಿಂದ ಮೇಲೆ ಖರೀದಿ ಪತ್ರ ಬರೆದುಕೊಡಲು ಸದರಿ ಪ್ರತಿವಾದಿಯರಿಗೆ ಕೇಳುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿಯರು 15ನೇ ಪ್ರತಿವಾದಿಗೆ ಖರೀದಿ ಪತ್ರ ಬರೆದುಕೊಡದೇ ಇದ್ದುದ್ದರಿಂದ 15ನೇ ಪ್ರತಿವಾದಿ ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರ ವಾರಸುದಾರರಿಗೆ ತಮ್ಮ ವಕೀಲರಿಂದ ಒಂದು ನೋಟೀಸು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ.

21. ಸದರಿ ಪ್ರತಿವಾದಿಯರು ಆ ನೋಟೀಸಿನ ಪ್ರಕಾರ ನಡೆದುಕೊಳ್ಳದೇ ಇದ್ದುದ್ದರಿಂದ ಓ.ಎಸ್.ನಂ.546/2022 ರ ಪ್ರಕಾರ ಇದೇ ನ್ಯಾಯಾಲಯದಲ್ಲಿ ಒಂದು ದಾವೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರ ವಾರಸುದಾರರು ಹಾಜರ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

22. ನನಗು ಮತ್ತು ಪ್ರತಿವಾದಿ 2 ಹಾಗೂ 3 ರವರಿಗು ಸಂಬಂಧ ಸರಿ ಇರುವುದಿಲ್ಲ. ಈ ದಾವೆ ಹೂಡಲು ದಾಖಲೆಗಳನ್ನು ನಾನೇ ತೆಗೆಯಿಸಿ-ಕೊಂಡಿರುತ್ತೇನೆ. 15ನೇ ಪ್ರತಿವಾದಿ ಹೂಡಿದ ದಾವೆಗೆ ತೊಂದರೆ ಮಾಡಬೇಕು ಎನ್ನುವ ಉದ್ದೇಶದಿಂದ ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರ ವಾರಸುದಾರರು ನಮ್ಮ ಕಡೆಯಿಂದ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

23. ಸರ್ವೆ ನಂ.50ರ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರು ಹೆಸರು ಮಾಲೀಕರು ಎಂದು ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಹಾಜರಪಡಿಸಿದ ದಾವಾ ಆಸ್ತಿಯ ಪಹಣಿ ಪತ್ರಿಕೆಗಳಲ್ಲಿ ಯಾರ ಹೆಸರು ಇದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿ 2, 3, ಹಾಗೂ ಮೃತ ಲಕ್ಷ್ಮಣ ಇವರ ಜಮೀನುಗಳ ಕುರಿತು ಯಾರು ವ್ಯವಹಾರ ಮಾಡಬಾರದು ಎಂದು ದಿನಪತ್ರಿಕೆಯಲ್ಲಿ ನಾವು ಸಾರ್ವಜನಿಕ ಪ್ರಕಟನೆಯನ್ನು ಪ್ರಕಟಿಸಿಲ್ಲ.

24. ಪ್ರತಿವಾದಿ 2, 3, ಹಾಗೂ ಮೃತ ಲಕ್ಷ್ಮಣ ತಮ್ಮ ಕುಟುಂಬದ ಒಳತಿಗಾಗಿ 15ನೇ ಪ್ರತಿವಾದಿಯ ಜೊತೆ ವ್ಯವಹಾರ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರ ವಾರಸುದಾರ ತಮ್ಮ ಕುಟುಂಬದ ಒಳತಿಗಾಗಿ 15ನೇ ಪ್ರ2ವಾದಿಯ ಜೊತೆ ವ್ಯವಹಾರ ಮಾಡಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

25. 14ನೇಪ್ರತಿವಾದಿಗೆ ಈ ದಾವೆ ಮಾಡಿದ ವಿಚಾರ ಮತ್ತು 15ನೇ ಪ್ರತಿವಾದಿ ಮಾಡಿದ ದಾವೆಯ ವಿಚಾರ ಗೊತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನುನಾವು ಮುನ್ನೋಳಿ ವಕೀಲರಿಂದ ಹಾಕಿಸಿದ್ದೇವೆ. ಮುನ್ನೋಳಿ ವಕೀಲರು ನಮ್ಮ ಮೇಲೆ ಇದೇ ದಾವಾ ಆಸ್ತಿಯ ವಿಚಾರವಾಗಿ ಇನ್ನೊಂದು ದಾವೆ ಹೂಡಿದ ಬಗ್ಗೆ ಗೊತ್ತಿಲ್ಲ.

26. 12ನೇ ಪ್ರತಿವಾದಿ ಅವಣ್ಣಾ ಇವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಅವರುಗಳ ಹೆಸರು ಪದ್ಮವ್ವ ಮತ್ತು ಸಕ್ರೆವ್ವ ಎಂದು ಇರುತ್ತದೆ. ಮುನ್ನೋಳಿ ವಕೀಲರು ಸದರಿ ಪದ್ಮವ್ವ ಮತ್ತು ಸಕ್ರೆವ್ವ ಇವರ ಕಡೆಯಿಂದ ಇದೇ ದಾವಾ ಆಸ್ತಿಯ ಕುರಿತು ಒಂದು ದಾವೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಾನು 5ನೇ ಪ್ರತಿವಾದಿ ಇದ್ದು, ನಾನು ನಮ್ಮ ವಕೀಲರ ಮುಖಾಂತರ ಹಾಜರ ಆಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಾವೆಯಲ್ಲಿ ಈ ದಾವೆಯ 2ನೇ ವಾದಿ 7ನೇ ಪ್ರತಿವಾದಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ.

27. ಈ ದಾವೆ ಮತ್ತು ಓ.ಎಸ್.ನಂ.197/2023 ರಲ್ಲಿ ಮಾಡಿದ ದಾವೆ 15ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಮಾಡಿರುತ್ತೇವೆ ಎಂದರೆ ಸರಿಯಲ್ಲ. 15ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2, 3, 12, 14 ಹಾಗೂ ಮೃತ ಲಕ್ಷ್ಮಣ ಇವರು ಮಾರಾಟಕ್ಕೆ ತೆಗೆದ ಅಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಓ.ಎಸ್. ನಂಃ 190/2023
ಪಿ.ಡಬ್ಲ್ಯೂ-1 (ಸಿದ್ದವ್ವ)

28. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ